# ರಾಹುಗ್ರಸ್ತ ರಣಜಿ

## ದೇಸಿ ಕ್ರಿಕೆಟ್ ದೊಡ್ಡಣ್ಣನ ಕುರಿತು ಬಿಸಿಸಿಐ ನಿರ್ಲಕ್ಷ್ಯ?



ರಣಜಿ ಪಂದ್ಯಾವಳಿ ಭಾರತೀಯ ಕ್ರಿಕೆಟ್‌ಗೆ ಬೆನ್ನುಮೂಳೆ ಇದ್ದಂತೆ. ಆಟಗಾರನೊಬ್ಬ ರಾಷ್ಟ್ರೀಯ ತಂಡವನ್ನು ಪ್ರತಿನಿಧಿಸಲಿಕ್ಕೆ ರಣಜಿ ಪಂದ್ಯಗಳಲ್ಲಿ ತೋರುವ ಪ್ರದರ್ಶನವೇ ಮಾನದಂಡ. ಇದೀಗ ಕಾಲ ಬದಲಾಗಿದೆ. 'ಐಪಿಎಲ್' ಎನ್ನುವ ಚುಟುಕು ಕ್ರಿಕೆಟ್ ಪ್ರವೇಶದೊಂದಿಗೆ ರಣಜಿ ಕ್ರಿಕೆಟ್ ವರ್ಚಸ್ಸು ಕಳೆದುಕೊಂಡಿದೆ. ಹಣದ ಹೊಳೆ ಹರಿಸುವ 'ಐಪಿಎಲ್' ಟೂರ್ನಿಗಳಿಗೆ ಮಾರುಹೋಗಿರುವ 'ಬಿಸಿಸಿಐ' ಪಾಲಿಗೆ ರಣಜಿ ಮಲಮಗುವಿನಂತೆ ಕಾಣಿಸುತ್ತಿರಬೇಕು. ಈ ನಿರ್ಲಕ್ಷ್ಯದ ಫಲ ಈಗಾಗಲೇ ಭಾರತೀಯ ಕ್ರಿಕೆಟ್‌ನಲ್ಲಿ ಕಾಣಿಸತೊಡಗಿದೆ. ಆಟಗಾರರ ದೈಹಿಕ ಕ್ಷಮತೆ ಕ್ಷೀಣಿಸುತ್ತಿದೆ. ಹೆಚ್ಚು ಸಮಯ, ಕ್ಷಮತೆ ಹಾಗೂ ಕಲೆಗಾರಿಕೆ ಬಯಸುವ ದೀರ್ಘಾವಧಿ ಕ್ರಿಕೆಟ್ ಬಸವಳಿಯುತ್ತಿದೆ. ವೇಗ ಹಾಗೂ ರೋಚಕತೆಯಷ್ಟೇ ಆಟದ ಜೀವಾಳವಲ್ಲ ಎನ್ನುವುದನ್ನು 'ಬಿಸಿಸಿಐ' ಮರೆತಿದೆ. ಕ್ರಿಕೆಟ್ ಅಂಗಳದಲ್ಲಿ ದೀರ್ಘ ಕಾಲ ಉಳಿಯುವ ಆಟಗಾರರ ಸಂಖ್ಯೆಯೂ ಕಡಿಮೆಯಾಗುತ್ತಿದೆ. ಇದೆಲ್ಲದರ ಫಲವೇ – ರಣಜಿಗೆ ಮರುಜೀವ ತುಂಬಬೇಕಾದ ಅಗತ್ಯದ ಕುರಿತು ಹಿರಿಯ ಆಟಗಾರರು ಧ್ವನಿ ಎತ್ತುತ್ತಿದ್ದಾರೆ. 'ಬಿಸಿಸಿಐ' ಕೇಳಿಸಿಕೊಳ್ಳಬೇಕಷ್ಟೆ.

■ ಪ್ರಮೋದ